ಶ್ರೀ ವೈ. ರಾಮಕೃಷ್ಣ.—ನಮ್ಮ ಹೈನುಗಾರಿಕೆ ಅಭಿವೃದ್ಧಿ ನಿಗಮದ ವ್ಯಾಪ್ತಿಗೆ ಒಳಪಟ್ಟ ರೀತಿ ೧೯೭೪–೭೫ರ ಸಾಲಿನಲ್ಲಿ ಸಪ್ತ ವಾರ್ಷಿಕ ಯೋಜನೆಯಲ್ಲಿ ೮೨ರ ವರೆಗೆ ಇರುತ್ತದೆ, ೮೨ರ ಮಾರ್ಚಿಯಾದ ಮೇಲೆ ಇವೆಲ್ಲವನ್ನೂ ಅಳವಡಿಸಿಕೊಂಡು ಈಗಾಗಲೇ ೮ ಜಿಲ್ಲೆಗಳಲ್ಲಿ ಏನು ಏನು ಕಾರ್ಯಕ್ರಮ ಹಾಕಿ ಕೊಂಡಿದೆ ಅದನ್ನೆಲ್ಲಾ ಇಲ್ಲಿ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು.—ಪ್ರಶ್ನೆ ನಂ. ೩೪೭, ೩೪೮ ಮಾನ್ಯ ಸದಸ್ಯರುಗಳು ಗೈರು ಹಾಜರಿದ್ದಾರೆ.

ಪ್ರಶ್ನೆ ನಂ. ೩೪೯ (೩೦೨) ಈ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ

Tax paid on Production of Yarn and Cloth in Harihar Polyfibre Factory Area.

426 SRI D. T. MAYANNA (Huliyurdurga).—Will the Chief Minister be pleased to state.—

(a) whether it has come to their notice that yarn and cloth is being manufactured at the premises of Harihar polyfibre factory

(b) if so, the amount of tax paid by them to the Government ;

SRI R. GUNDU RAO (Chief Minister).—

(a) No.

(b) This question does not arise in view of the above reply.

ಶ್ರೀ ಡಿ. ಟಿ. ಮಾಯಣ್ಣ.—ಹರಿಹರ ಪಾಲಿಫೈಬರ್ ಕಾರ್ಖಾನೆಯ ಪ್ರದೇಶದಲ್ಲಿ ನೂಲು ಮತ್ತು ಬಟ್ಟೆಯನ್ನು ತಯಾರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದೀರಿ. ಆದರೆ ಅಗ್ರಿಮೆಂಟ್ ಮಾಡುವಾಗ ಬಟ್ಟೆಯನ್ನು ತಯಾರು ಮಾಡಬೇಕು ಎಂದು ಅಗ್ರಿಮೆಂಟಿನಲ್ಲಿ ಕಂಡೀಷನ್ ಇದೆಯೇ ?

ಶ್ರೀ ಆರ್. ಗುಂಡೂರಾವ್.—ಅಗ್ರಿಮೆಂಟ್ ಕಂಡೀಷನ್ ಪ್ರಕಾರ ಅವರು ಬಟ್ಟೆ ಮತ್ತು ನೂಲನ್ನು ತಯಾರು ಮಾಡುತ್ತಿಲ್ಲ. ಆದರೆ ಅವರು ಅಗ್ರಿಮೆಂಟ್ ಪ್ರಕಾರ ಗ್ರೇ ಲಿನನ್ ರಾಮೆಟೀರಿಯಲ್ಸ್ ತಯಾರು ಮಾಡುತ್ತಾರೆ.

ಶ್ರೀ ಡಿ. ಟಿ. ಮಾಯಣ್ಣ.—ಹಿಂದಿನ ಸರ್ಕಾರ ಇದ್ದಾಗ ಮಾಡಿಕೊಂಡಂತಹ ಅಗ್ರಿಮೆಂಟಿನಲ್ಲಿ ಅಲ್ಲಿ ಬಟ್ಟೆಯನ್ನು ತಯಾರು ಮಾಡಬೇಕು ಎಂದು ಕಂಡೀಷನ್ ಇದೆಯೇ ಅಥವಾ ನೂಲು ಮಾತ್ರ ಪರದೇಶಕ್ಕೆ ಕಳುಹಿಸಬೇಕು ಎಂದು ಕಂಡೀಷನ್ ಇದೆಯೇ ?

ಶ್ರೀ ಆರ್. ಗುಂಡೂರಾವ್.—ಆ ಅಗ್ರಿಮೆಂಟ್ ಕಂಡೀಷನ್‌ನಲ್ಲಿ ಇದೇ ತರಹ ಮಾಡಬೇಕು ಎಂದು ಕಂಡೀಷನ್ ಹಾಕಿಲ್ಲ.

ಶ್ರೀ ಡಿ. ಟಿ. ಮಾಯಣ್ಣ.—ಅವರು ಈ ಬಗ್ಗೆ ಸರ್ಕಾರಕ್ಕೆ ತೆರಿಗೆಯನ್ನು ಕೊಡುತ್ತಿಲ್ಲ ಎಂದು ಹೇಳಿದ್ದೀರಿ, ಅವರು ತೆರಿಗೆಯನ್ನು ಕೊಡದೆ ನೂಲು ಮಾತ್ರ ಪರದೇಶಕ್ಕೆ ಕಳುಹಿಸುತ್ತಿದ್ದಾರೆ. ಅವರು ಬೂರಕ್ಕಾಗಿ ನಮ್ಮ ಅರಣ್ಯವನ್ನು ಕಡಿದು ಹಾಳು ಮಾಡುತ್ತಿದ್ದಾರೆ. ಆದ್ದರಿಂದ ಕಂಡೀಷನ್ ಪ್ರಕಾರ ಇಲ್ಲಿಯೇ ಬಟ್ಟೆಯನ್ನು ತಯಾರು ಮಾಡಬೇಕು ಎಂದು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಡಿ. ಟಿ. ಮಾಯಣ್ಣ.—ತಪ್ಪು ಕಂಡೀಷನ್ ಹಾಕಿ ಆ ಪಾಲಿಫೈಬರ್ ಫ್ಯಾಕ್ಟರಿಯವರಿಗೆ ಹೇಳ ಬೇಕು. ರೈತ ಕಬ್ಬು ಬೆಳೆದರೆ ಅದಕ್ಕೆ ಸರ್ಕಾರದವರು ತೆರಿಗೆ ಹಾಕುತ್ತಾರೆ. ರೈತ ಕೋಳಿ ಮೊಟ್ಟೆ ಉತ್ಪಾದನೆ ಮಾಡಿದರೆ ಅದಕ್ಕೆ ತೆರಿಗೆಯನ್ನು ಹಾಕುತ್ತಾರೆ. ಆದರೆ ಈ ಫ್ಯಾಕ್ಟರಿಯವರು ಬಟ್ಟೆಯನ್ನು

ತಯಾರು ಮಾಡದೆ ನೂಲನ್ನು ತಯಾರು ಮಾಡಿ ಪರದೇಶಕ್ಕೆ ಕಳುಹಿಸುತ್ತಿದ್ದಾರೆ. ಆದ್ದರಿಂದ ಇದನ್ನು ಸರಿಪಡಿಸುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಕಾನೂನು ಪ್ರಕಾರ ಏನು ಕ್ರಮವನ್ನು ಕೈಗೊಳ್ಳಬೇಕೋ ಅದನ್ನು ಕೈಗೊಳ್ಳುತ್ತೇವೆ.

Gundal Reservoir Project in Kollegal Taluk

478 SRI G. RAJU GOWDA (Hanur).-Will the Minister for Revenue and Agriculture be pleased to state.-

(a) whether it is a fact that the compensation to the owners of land which was acquired for construction of Right and Left Bank Channel of Gundal Reservoir Project in Kollegal Taluk has not been paid so far ;

(b) if so, the reasons ?

SRI S. BANGARAPPA (Minister for Revenue and Agriculture) —

(a) Yes.

(b) The Acquisition Proceedings are in several stages as per the provisions of L. A. Act. Payment will be made soon after the acquisition proceedings are finalised.

ಶ್ರೀ ಜಿ. ರಾಜುಗೌಡ.—ಸ್ವಾಮಿ, ಈ ಗುಂಡಲ್ ಜಲಾಶಯದ ಯೋಜನೆಗೆ ಸಂಬಂಧಪಟ್ಟ ಹಾಗೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಜಮೀನಿನ ಮಾಲೀಕರಿಗೆ ಪರಿಹಾರವನ್ನು ಕೊಡುವ ಬಗ್ಗೆ ಪೂರ್ವ ಭಾವಿ ಕ್ರಮ ಮುಗಿದಿದೆಯೇ ? ಮತ್ತು ಈಗ ಅದು ಯಾವ ಘಟ್ಟದಲ್ಲಿ ಇದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ಇದಕ್ಕೆ ಸಂಬಂಧಪಟ್ಟ ಹಾಗೆ ೮ ಕೇಸುಗಳು ಇವೆ. ಒಂದು ಆಕ್ವಿಜಿಷನ್ ಕೇಸ್‌ನಲ್ಲಿ ಅವಾರ್ಡ್ ಅಪ್ರೂವ್ ಆಗಿದೆ. ಅವಾರ್ಡ್ ಅಪ್ರೂವ್ ಆಗಿ ಹಣ ಕೊಡತಕ್ಕ ಸಂದರ್ಭದಲ್ಲಿ ಒಂದು ಕೇಸು ಇದೆ. ೨ ಕೇಸುಗಳ ಸಂಬಂಧದಲ್ಲಿ ಸೆಕ್ಷನ್ ೬೧೦ರ ಪ್ರಕಾರ ಅವಾರ್ಡ್ ನೋಟೀಸ್ ಜಾರಿಯಾಗಿದೆ. ಕ್ಲೈಮ್ಸ್ ಪರಿಶೀಲಿಸುತ್ತಿದ್ದಾರೆ. ಇನ್ನು ಉಳಿದಿರುವ ಕೇಸುಗಳ ಸಂಬಂಧದಲ್ಲಿ ಮೆಜರ್‌ಮೆಂಟ್ ಆಗಿ ಫೈನಲ್ ನೋಟಿಫಿಕೇಷನ್ ಇಷ್ಯೂ ಮಾಡುವ ಹಂತದಲ್ಲಿ ಇದೆ.

ಶ್ರೀ ಜಿ. ರಾಜುಗೌಡ.—ಇದು ಕೇವಲ ಒಂದು ಗ್ರಾಮಕ್ಕೆ ಸಂಬಂಧಪಟ್ಟ ಹಾಗೆ ಆಗಿದೆ. ಇನ್ನು ೪ ಗ್ರಾಮಗಳಲ್ಲಿ ಜಲಾಶಯದ ಬಲ ಮತ್ತು ಎಡದಂಡೆ ನಾಲೆಗಳ ನಿರ್ಮಾಣ ಕಾಮಗಾರಿಗೆ ಸ್ವಾಧೀನಪಡಿಸಿಕೊಂಡ ಜಮೀನಿನ ಮಾಲೀಕರಿಗೆ ಪರಿಹಾರವನ್ನು ಕೊಡುವ ಬಗ್ಗೆ ಇನ್ನೂ ಏನೂ ತೀರ್ಮಾನ ಆಗಿಲ್ಲ. ಈಗಾಗಲೇ ೫ ವರ್ಷಗಳು ಕಳೆದುಹೋಗಿದೆ. ರೈತರಿಗೆ ಪರಿಹಾರ ಧನ ದೊರೆತಿಲ್ಲ. ಕಾನೂನಿನಲ್ಲಿ ಕೆಲವು ನ್ಯೂನತೆಗಳು ಇವೆ. ಬಡವರಿಗೆ ನಿವೇಶನವನ್ನು ಕೊಡುವುದಕ್ಕಾಗಿ ಜಮೀನು ಸ್ವಾಧೀನ ಮಾಡಿಕೊಳ್ಳುವುದಕ್ಕೆ ಇರತಕ್ಕ ಕಾನೂನು ಇಟ್ಟುಕೊಂಡಿದ್ದಾರೆ. ಜನರಲ್ ಆಕ್ವಿಜಿಷನ್ ಕಾನೂನು ಮಾಡಿಕೊಂಡು ಇದನ್ನು ಬೇಗನೆ ಮಾಡಬೇಕು. ಮೊದಲನೇ ನೋಟಿಫಿಕೇಷನ್ ರೈತರಿಗೆ ಜಾರಿ ಆಗದೆ ಅಲ್ಲಿಂದ ಅವು ಹಾಗೆಯೇ ವಾಪಸ್ಸು ಬಂದಿವೆ. ಇದರಿಂದಾಗಿ ಮತ್ತೇ ನೋಟಿಫಿಕೇಷನ್ ಆಗಬೇಕಾದ ಸಂದರ್ಭಗಳು ಬರುತ್ತವೆ. ಆದ್ದರಿಂದ ಇಂಥಾ ಪ್ರಕರಣಗಳ ಬಗ್ಗೆ ಬೇಗ ಪರಿಹಾರವನ್ನು ರೈತರಿಗೆ ಕೊಡುವ ದೃಷ್ಟಿಯಿಂದ ಈ ಕಾನೂನನ್ನು ತಿದ್ದುಪಡಿ ಮಾಡುವ ಬಗ್ಗೆ ಯೋಚನೆ ಮಾಡುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ಈ ಗುಂಡಾಲ್ ಜಲಾಶಯದ ಎಡದಂಡೆ ಮತ್ತು ಬಲದಂಡೆ ನಾಲೆಗಳು ಏನಿವೆ ಇವುಗಳ ನಿರ್ಮಾಣ ಕಾಮಗಾರಿಗೆ ಜಮೀನನ್ನು ಸ್ವಾಧೀನ ಪಡಿಸಿಕೊಂಡು ೪ ಹಳ್ಳಿಗಳ ಬಗ್ಗೆ ಮಾನ್ಯ